ಪ್ರಜಾವಾಣಿ

**Friday, September 23, 2011**

### ಸಿಪಿಎಲ್: ಅಭಿಜಿತ್ ಮಿಂಚಿನ ಪ್ರದರ್ಶನ

# ಎಸ್‌ಜೆಸಿಸಿಗೆ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಭಿಜಿತ್ (39) ಅವರ ಚುರುಕಾದ ಬ್ಯಾಟಿಂಗ್ ನೆರವಿನಿಂದ ಸೇಂಟ್ ಜೋಸೆಫ್ ಅಫ್ ಕಾಮರ್ಸ್ ಕಾಲೇಜು (ಎಸ್‌ಜೆಸಿಸಿ) ತಂಡದವರು ಇಲ್ಲಿ ನಡೆಯುತ್ತಿರುವ ಚೊಚ್ಚಲ ಕಾಲೇಜ್ ಪ್ರೀಮಿಯರ್ ಲೀಗ್ (ಸಿಪಿಎಲ್) ಟ್ವೆಂಟಿ–20 ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಎಸ್‌ಬಿಎಂಜೆಸಿಇ ತಂಡದ ಎದುರು 16 ರನ್‌ಗಳ ಭರ್ಜರಿ ಗೆಲುವು ಪಡೆಯಿತು.

ಇಲ್ಲಿನ ಸೇಂಟ್ ಜಾನ್ಸ್ ವೈದ್ಯಕೀಯ ಕಾಲೇಜಿನ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಎಸ್‌ಜೆಸಿಸಿ ಕಾಲೇಜು 20 ಓವರ್‌ಗಳಲ್ಲಿ 7 ವಿಕೆಟ್‌ಗೆ 159 ರನ್ ಗಳಿಸಿತು. ಇದಕ್ಕುತ್ತರವಾಗಿ ಎಸ್‌ಬಿಎಂಜೆಸಿಇ 18.2 ಓವರ್‌ಗಳಲ್ಲಿ ಕೇವಲ 98 ರನ್ ಗಳಿಸಿ ಆಲ್ ಔಟ್ ಆಯಿತು.

ಸಂಕ್ಷಿಪ್ತ ಸ್ಕೋರು: (ಲೀಗ್ ಪಂದ್ಯ) ಎಸ್‌ಜೆಸಿಸಿ 20 ಓವರ್‌ಗಳಲ್ಲಿ 7 ವಿಕೆಟ್‌ಗೆ 159 (ಅಭಿಜಿತ್ 39, ಭರತ್ 33, ಕಾರ್ತಿಕ್ 34ಕ್ಕೆ3). ಎಸ್‌ಬಿಎಂಜೆಸಿಇ 18.2 ಓವರ್‌ಗಳಲ್ಲಿ 143. (ಮಂಗರಾಮ್ 24, ನೀಲೇಶ್ 23ಕ್ಕೆ3, ಸಚಿನ್ 19ಕ್ಕೆ2, ಎ.ಎಸ್. ಶ್ರೀಕೃಷ್ಣ 18ಕ್ಕೆ2). ಎಸ್‌ಜೆಸಿಸಿಗೆ 16 ರನ್ ಜಯ.

(ಲೀಗ್ ಪಂದ್ಯ): ವಿಜಯಾ ಕಾಲೇಜ್: 20 ಓವರ್‌ಗಳಲ್ಲಿ 9 ವಿಕೆಟ್‌ಗೆ 136 (ಶ್ರೀಕೃಷ್ಣ 32, ವರುಣ್ ಪ್ರಕಾಶ್ 30, ಜೋಯೆಲ್ 12ಕ್ಕೆ2, ಅಶ್ವಿನ್ 21ಕ್ಕೆ2, ಅಜಯ್ ಕರಣ್ 28ಕ್ಕೆ2). ಲೊಯೊಲಾ ಕಾಲೇಜ್: 18.3 ಓವರ್‌ಗಳಲ್ಲಿ 5 ವಿಕೆಟ್‌ಗೆ 140 (ಮುರಳಿ 60, ಜೋಹಾರ್ 22ಕ್ಕೆ2, ಭುವನೇಶ್ವರ್ 30ಕ್ಕೆ2). ಲೊಯೊಲಾ ಕಾಲೇಜ್‌ಗೆ ಐದು ವಿಕೆಟ್ ಗೆಲುವು.

(ನಾಕ್ ಔಟ್ ಮಾದರಿ ಪಂದ್ಯ)

ಮಹಾರಾಜಾಸ್ ಕಾಲೇಜ್ ಕೊಚ್ಚಿ: 20 ಓವರ್‌ಗಳಲ್ಲಿ 116 (ನಿತಿನ್ 23ಕ್ಕೆ3, ಶಶೀಂದ್ರ 8ಕ್ಕೆ2). ಎಸ್‌ಬಿಎಂಜೆಸಿ ಜೆ.ಸಿ ರೋಡ್: 19.1 ಓವರ್‌ಗಳಲ್ಲಿ 6 ವಿಕೆಟ್‌ಗೆ 117 (ಬಿ. ದಿನೇಶ್ 27, ಬಿ. ರಾಹುಲ್ 26; ಸದ್ದಾಮ್ 14ಕ್ಕೆ2). ಎಸ್‌ಬಿಎಂಜೆಸಿಗೆ 4 ವಿಕೆಟ್‌ಗೆ ಜಯ.

ಟಿಟಿಎಲ್ ಕಾಲೇಜ್, ಮೈಸೂರು: 20 ಓವರ್‌ಗಳಲ್ಲಿ 142 (ವಿ.ಟಿ. ರೋಹಿತ್ 49, ಸೋಮಶೇಖರನ್ 27; ಸುಹಾಲಿ 28ಕ್ಕೆ3, ಗಿರೀಶ್ 11ಕ್ಕೆ2). ಪ್ರೆಸಿಡೆಂಟ್ ಕಾಲೇಜ್ 20 ಓವರ್‌ಗಳಲ್ಲಿ 142 (ಪ್ರತೀಕ್ 34; ಉತ್ತಮ ರಾಜ್ 33ಕ್ಕೆ4, ಸೋಮಶೇಖರನ್27ಕ್ಕೆ4). ಬೌಲ್ ಔಟ್‌ನಲ್ಲಿ ಪ್ರೆಸಿಡೆಂಟ್‌ಗೆ ಗೆಲುವು.